# ಡಿ–ಗ್ಲಾಮ್ ಲುಕ್‌ನಲ್ಲಿ ಸೋನಲ್

**ಮದುವೆ** ನಂತರ ಸಣ್ಣ ಬಿಡುವು ಪಡೆದುಕೊಂಡಿದ್ದ ನಟಿ ಸೋನಲ್ ಮೊಂತೆರೊ ಮತ್ತೆ ಸೆಟ್‌ಗೆ ಮರಳಿದ್ದಾರೆ. ಒಂದಾದ ನಂತರ ಒಂದರಂತೆ ಹಲವು ಪ್ರಾಜೆಕ್ಟ್‌ಗಳಲ್ಲಿ ಬ್ಯುಸಿಯಾಗಿದ್ದಾರೆ. ಸದ್ಯ ಪ್ರಜ್ವಲ್ ದೇವರಾಜ್ ಜೊತೆ ನಟಿಸಿರುವ 'ರಾಕ್ಷಸ' ಸಿನಿಮಾ ಬಿಡುಗಡೆಗೆ ಸಿದ್ಧವಾಗಿದ್ದು, ಅದರಲ್ಲಿ ತಮ್ಮ ಪಾತ್ರದ ವಿಶೇಷತೆಯ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

'ರಾಕ್ಷಸ', ಟೈಂ ಲೂಪ್ ಸೈನ್ಸ್ ಫಿಕ್ಷನ್ ಸಿನಿಮಾ ಆಗಿದ್ದು, ಲೋಹಿತ್ ಎಚ್. ನಿರ್ದೇಶನ ಮಾಡುತ್ತಿದ್ದಾರೆ. ಪ್ರಜ್ವಲ್ ದೇವರಾಜ್ ಜೊತೆ ಸೋನಲ್ ನಟಿಸಿದ್ದು, ಅವರ ಮದುವೆ ನಂತರ ಬಿಡುಗಡೆ ಕಾಣುತ್ತಿರುವ ಮೊದಲ ಸಿನಿಮಾ ಇದಾಗಿದೆ. ಇದೇ ಫೆಬ್ರುವರಿ 26ಕ್ಕೆ ಸಿನಿಮಾ ಬಿಡುಗಡೆಯಾಗಲಿದೆ.

'ರಾಕ್ಷಸ' ಸಿನಿಮಾದಲ್ಲಿ ತಮ್ಮ ಪಾತ್ರದ ಬಗ್ಗೆ ಮಾತನಾಡಿರುವ ಸೋನಲ್, 'ಸೈನ್ಸ್ ಫಿಕ್ಷನ್ ಆಗಿದ್ದರೂ ಕಥೆ ಕಮರ್ಷಿಯಲ್ ಅಂಶಗಳನ್ನು ಒಳಗೊಂಡಿದೆ. ನನ್ನ ಪಾತ್ರ ಪ್ರಭಾವಕಾರಿಯಾಗಿದೆ. ಸ್ಕ್ರೀನ್ ಡಾಮಿನೇಟ್ ಮಾಡುವುದಿಲ್ಲ ಎಂದರೂ ಕಥೆಗೆ ಪೂರಕವಾಗಿ ಸಾಗುವಂಥ ಪಾತ್ರ. ವಿವಾಹಿತ ಮಹಿಳೆಯ ಬದುಕಿನ ಹಲವು ಅಂಶಗಳು ಕನೆಕ್ಟ್ ಆಗುತ್ತವೆ. ಹತ್ತರಲ್ಲಿ ಆರು ಮಹಿಳೆಯರು ಈ ಸಿನಿಮಾದಲ್ಲಿ ತಮ್ಮನ್ನು ತಾವು ಕಂಡುಕೊಳ್ಳುತ್ತಾರೆ. ಇದು ಡಿ–ಗ್ಲಾಮ್ ರೋಲ್. ಆದರೆ ಬಹು ಆಳದ, ಅರ್ಥಗರ್ಭಿತ ಪಾತ್ರ' ಎಂದಿದ್ದಾರೆ.



ಇದೇ ಸಂದರ್ಭದಲ್ಲಿ, ಮದುವೆ ನಂತರ ತಮ್ಮ ಕರಿಯರ್‌ನಲ್ಲಾಗಿರುವ ಬದಲಾವಣೆಗಳ ಕುರಿತೂ ಮಾತನಾಡಿರುವ ಸೋನಲ್, 'ಮದುವೆಗೂ ಮುನ್ನ ಸ್ಕ್ರಿಪ್ಟ್‌ಗಳ ಬಗ್ಗೆ ಚರ್ಚೆ ಮಾಡಲು, ಮಾರ್ಗದರ್ಶನ ನೀಡಲು ಯಾರೂ ಇರಲಿಲ್ಲ. ಈಗ ನನ್ನ ಪತಿ ತರುಣ್ ಸುಧೀರ್ ಇದ್ದಾರೆ. ಅವರು ನನಗೆ ದೊಡ್ಡ ಬೆಂಬಲವಾಗಿದ್ದಾರೆ. ಈಗ ನಾನು ತುಂಬಾ ಸೆಲೆಕ್ಟಿವ್ ಆಗಿದ್ದೇನೆ. ಸ್ವಲ್ಪ ಸಮಯ ಬ್ರೇಕ್ ತೆಗೆದುಕೊಂಡಿದ್ದೆ. ಈಗ ಹೊಸ ಎನರ್ಜಿ ಜೊತೆ ಮರಳಿದ್ದೇನೆ' ಎಂದು ಸಂತಸ ಹಂಚಿಕೊಂಡಿದ್ದಾರೆ.

'ರಾಕ್ಷಸ' ಸಿನಿಮಾ ಜೊತೆಗೆ, ವಿನೋದ್ ಪ್ರಭಾಕರ್ ಜೊತೆ ನಟಿಸಿರುವ 'ಮಾದೇವಾ' ಸಿನಿಮಾ ಬಿಡುಗಡೆಯನ್ನೂ ಎದುರು ನೋಡುತ್ತಿದ್ದಾರೆ. 'ತಲ್ವಾರ್‌ಪೇಟೆ' ಸಿನಿಮಾ ಚಿತ್ರೀಕರಣವೂ ಮುಗಿದಿದ್ದು, 'ಸರೋಜಿನಿ ನಾಯ್ಡು' ಸಿನಿಮಾ ತಂಡ ಕೂಡ ಚಿತ್ರೀಕರಣ ಆರಂಭ ಮಾಡಲಿದೆ. ಇವೆಲ್ಲದರ ಜೊತೆ ಇನ್ನೆರಡು ಪ್ರಾಜೆಕ್ಟ್‌ಗಳು ಸೋನಲ್ ಲಿಸ್ಟ್‌ನಲ್ಲಿವೆ.



# ಅಂತರರಾಷ್ಟ್ರೀಯ ಚಿತ್ರೋತ್ಸವಗಳಿಗೆ 'ಸ್ವಪ್ನಮಂಟಪ'

ಬರಗೂರು ರಾಮಚಂದ್ರಪ್ಪನವರು ನಿರ್ದೇಶಿಸಿರುವ 'ಸ್ವಪ್ನಮಂಟಪ' ಕನ್ನಡ ಚಿತ್ರ ಎರಡು ಅಂತರರಾಷ್ಟ್ರೀಯ ಚಿತ್ರೋತ್ಸವಗಳಿಗೆ ಆಯ್ಕೆಯಾಗಿದೆ. ದೆಹಲಿ ಅಂತರರಾಷ್ಟ್ರೀಯ ಚಿತ್ರೋತ್ಸವ ಮತ್ತು ಷಿಕಾಗೊ ಚಿತ್ರೋತ್ಸವಗಳ ಸ್ಪರ್ಧಾ ವಿಭಾಗಕ್ಕೆ ಈ ಸಿನಿಮಾ ಆಯ್ಕೆಯಾಗಿದೆ.

'ಸ್ವಪ್ನಮಂಟಪ' ಚಿತ್ರವು ಬರಗೂರರ ಕಾದಂಬರಿಯನ್ನು ಆಧರಿಸಿದ ಸಿನಿಮಾವಾಗಿದ್ದು, ಬರಗೂರು ರಾಮಚಂದ್ರಪ್ಪನವರೇ ಚಿತ್ರಕಥೆ, ಸಂಭಾಷಣೆ, ಗೀತರಚನೆ ಮಾಡಿ ನಿರ್ದೇಶಿಸಿದ್ದಾರೆ.

ನಾಡಿನ ಪಾರಂಪರಿಕ ಸ್ಥಳಗಳ ಮಹತ್ವ ಮತ್ತು ಅವುಗಳ ಸಂರಕ್ಷಣೆಯ ಅಗತ್ಯವನ್ನು ಮನಗಾಣಿಸುವ ಕಥಾವಸ್ತುವನ್ನು 'ಸ್ವಪ್ನಮಂಟಪ' ಸಿನಿಮಾ ಒಳಗೊಂಡಿದೆ.

ಒಂದು ಹಳ್ಳಿಯಲ್ಲಿ ರಾಜನೊಬ್ಬ 'ಸ್ವಪ್ನಮಂಟಪ'ವನ್ನು ನಿರ್ಮಾಣ ಮಾಡಿರುತ್ತಾನೆ. ಈ ಚಾರಿತ್ರಿಕ ಮಂಟಪವನ್ನು ಕೆಡವಿ ಹಾಕುವ ಪ್ರಯತ್ನಕ್ಕೆ ಚಿತ್ರದ ನಾಯಕ ಹಾಗೂ ನಾಯಕಿ ತಡೆಯೊಡ್ಡುತ್ತಾರೆ. ಜನರಲ್ಲಿ ಜಾಗೃತಿ ಮೂಡಿಸುತ್ತಾರೆ.

ಕಥಾನಾಯಕರಾಗಿ ವಿಜಯ ರಾಘವೇಂದ್ರ ಮತ್ತು ನಾಯಕಿಯಾಗಿ ರಂಜನಿ ರಾಘವನ್ ಇಬ್ಬರೂ ದ್ವಿಪಾತ್ರದಲ್ಲಿ ಅಭಿನಯಿಸಿರುವ ಈ ಚಿತ್ರದ ತಾರಾಗಣದಲ್ಲಿ ಸುಂದರರಾಜ್, ರಜನಿ, ಶೋಭಾ ರಾಘವೇಂದ್ರ, ರಾಜಪ್ಪ ದಳವಾಯಿ, ಸುಂದರರಾಜ ಅರಸು, ಮಹಾಲಕ್ಷ್ಮಿ, ಅಂಬರೀಶ್ ಸಾರಂಗಿ, ವೆಂಕಟರಾಜು, ಶಿವಲಿಂಗ ಪ್ರಸಾದ್ ಮುಂತಾದವರು ಇದ್ದಾರೆ.

ಎ.ಎಂ.ಬಾಬು ಅವರು ಮಲ್ಲೈ ಮಹದೇಶ್ವರ ಎಂಟರ್‌ಪ್ರೈಸಸ್ ಲಾಂಛನದಲ್ಲಿ ನಿರ್ಮಾಣ ಮಾಡಿದ್ದು, ಸುರೇಶ್ ಅರಸು ಸಂಕಲನ, ನಾಗರಾಜ ಆದವಾನಿ ಛಾಯಾಗ್ರಹಣ, ಶಮಿತಾ ಮಲ್ನಾಡ್ ಸಂಗೀತ ನಿರ್ದೇಶನ, ತ್ರಿಭುವನ್ ನೃತ್ಯ ಸಂಯೋಜನೆ ಇದೆ. ನಟ್ರಾಜ್ ಶಿವು ಮತ್ತು ಪ್ರವೀಣ್ ಈ ಚಿತ್ರದ ಸಹನಿರ್ದೇಶಕರು.